## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2020-21ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಎರಡನೇ ತ್ರೈಮಾಸಿಕದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಇದೇ ಕ್ರಮಾಂಕದ ಆದೇಶ ದಿನಾಂಕ:04-08-2020.
2. ಸರ್ಕಾರದ ಇದೇ ಕ್ರಮಾಂಕದ ಆದೇಶ ದಿನಾಂಕ:19-8-2020.
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪತ್ರಸಂಖ್ಯೆ:ಡಿಕೆಸಿ/31015/01/2020, ದಿನಾಂಕ:08-09-2020.

*****

ಪ್ರಸ್ತಾವನೆ:

ಮೇಲೆ(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2020-21ನೇ ಸಾಲಿನ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಅದರನ್ವಯ 2020-21ನೇ ಸಾಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮೊದಲನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಎರಡನೇ ತ್ರೈಮಾಸಿಕದ ಅನುದಾನದ ಒಟ್ಟು ಮೊತ್ತ ರೂ. 1112.77 ಲಕ್ಷಗಳನ್ನು ಬಿಡುಗಡೆ ಮಾಡಿ ಸೂಕ್ತ ಆದೇಶ ಹೊರಡಿಸುವಂತೆ ಮೇಲೆ ಓದಲಾದ (2)ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕಸಂವಾ 166 ಕಸಧ 2020, ಬೆಂಗಳೂರು, ದಿನಾಂಕ:14-09-2020.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2020-21ನೇ ಸಾಲಿನ ಕ್ರಿಯಾ ಯೋಜನೆಗಳ ಕಾರ್ಯಕ್ರಮಗಳಿಗೆ ಎರಡನೇ ತ್ರೈಮಾಸಿಕದ ಅನುದಾನವನ್ನು ಅನುಬಂಧದಲ್ಲಿ ಲಗತ್ತಿಸಿರುವಂತೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

1. 2020-21ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿದ ಅನುದಾನ ಎಷ್ಟು ಸರ್ಕಾರದಿಂದ ಅನುಮೋದಿತ ಕ್ರಿಯಾ ಯೋಜನೆಯಂತೆ ಹಣ ಬಳಕೆ ಪ್ರಮಾಣ ಪತ್ರವನ್ನು ವಿವರವಾಗಿ ಸಲ್ಲಿಸುವುದು (ಯಾವ ಯಾವ ಕಾರ್ಯಕ್ರಮಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಪರಿಪೂರ್ಣ ವಿವರ).
2. ಸದರಿ ಅನುದಾನಕ್ಕೆ ಸಂಬಂಧಿಸಿದಂತೆ ಆಡಿಟ್ ಮಾಡಲಾಗಿದೆಯೇ ಮಾಡಿದಲ್ಲಿ ಸಲ್ಲಿಸುವುದು (ಮಾಡದೇ ಇದ್ದಲ್ಲಿ ಆಡಿಟ್ ಮಾಡಿಸುವ ಷರತ್ತಿಗೊಳಪಟ್ಟು ಪ್ರಸ್ತಾವನೆ ಸಲ್ಲಿಸುವುದು).
3. 2020-21ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಂತೆ ಉಪಯೋಗವಾಗದ ಹಣದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ/ಮಾಡಲಾಗಿದೆ ಎಂಬುದರ ಬಗ್ಗೆ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ. ಒಂದು ವೇಳೆ ಮಾಡದಿದ್ದಲ್ಲಿ ಎಷ್ಟು ದಿನಗಳೊಳಗಾಗಿ ಮಾಡಲಾಗುವುದು ಎಂಬ ಷರತ್ತಿಗೊಳಪಟ್ಟು ಪ್ರಸ್ತಾವನೆಯನ್ನು ಸಲ್ಲಿಸುವುದು.

4. 2020-21ನೇ ಸಾಲಿನ ಲೇಖಾನುದಾನ ಮಿತಿಯೊಳಗೆ ಅನುದಾನವನ್ನು ವೆಚ್ಚ ಮಾಡಲು ಕ್ರಮವಹಿಸತಕ್ಕದ್ದು.
5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಗಳು 2000 ಅನ್ನು ಕಡ್ಡಾಯವಾಗಿ ಪಾಲಿಸುವುದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2020, ದಿನಾಂಕ:30-05-2020 ಮತ್ತು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ ವೆಚ್ಚ-7/2020, ದಿನಾಂಕ:30-05-2020ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Malathi PS 14/9/20
(ಪಿ.ಎಸ್.ಮಾಲತಿ)
ಸರ್ಕಾರದ ಉಪ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.

ಗೆ:

1. ಮಹಾಲೇಖಪಾಲರು (ಎ&ಇ), (ಜಿ&ಎಸ್ ಎಸ್ ಎ), (ಇ & ಆರ್ ಎಸ್ ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ಖಜಾನೆ ಅಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7&8), ವಿಧಾನಸೌಧ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ:ಕಸಂವಾ 166 ಕಸಧ 2020, ಬೆಂಗಳೂರು, ದಿನಾಂಕ: 14-09-2020.

## ಅನುಬಂಧ-1

| ಕ್ರ.ಸಂ | ಲೆಕ್ಕಶೀರ್ಷಿಕೆ | ಯೋಜನೆ | 2020-21ನೇ ಸಾಲಿನ ಆಯವ್ಯಯದ ಮಿತಿಯಲ್ಲಿ ಹಂಚಿಕೆ ಮಾಡಿಕೊಳ್ಳಲಾದ ಅನುದಾನ (ರೂ.ಲಕ್ಷಗಳಲ್ಲಿ) | ಮೊದಲನೇ ಕಂತು |
|---|---|---|---|---|
| 1. | ಚಲನಚಿತ್ರ ಮತ್ತು ನಾಟಕ ತರಬೇತಿ ಸಂಸ್ಥೆಗಳಿಗೆ ಆರ್ಥಿಕ ಸಹಾಯ<br>2205-00-101-0-07 | | | |
| | 2205-00-101-0-07-101 | ಸಹಾಯಾನುದಾನ (ವೇತನಗಳು):<br>ಮೈಸೂರು ರಂಗಾಯಣ ಕಲಾವಿದರು ಹಾಗೂ ಸಿಬ್ಬಂದಿ ವೇತನ | 237.46 | 59.37 |
| | 2205-00-101-0-07-103 | ಸಹಾಯಾನುದಾನ (ಸಾಮಾನ್ಯ):<br>ಮೈಸೂರು ರಂಗಾಯಣ ಚಟುವಟಿಕೆ ಹಾಗೂ ರಂಗ ಶಿಕ್ಷಣ ಕೇಂದ್ರದ ಡಿಪ್ಲೋಮಾ ಕೋರ್ಸ್ | 98.00 | 24.50 |
| | | ಒಟ್ಟು | 335.46 | 83.87 |
| 2. | ಇತರೆ ಭಾಷೆಗಳಿಗೆ ಕನ್ನಡ ಸಾಹಿತ್ಯ ಅನುವಾದ<br>2205-00-101-0-13-059 | ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಚಟುವಟಿಕೆ ಮತ್ತು ಇತರೆ ಭಾರತೀಯ ಭಾಷೆಗಳಿಗೆ ಕನ್ನಡ ಸಾಹಿತ್ಯ ಭಾಷಾಂತರ ಪ್ರಕಟಣೆಗಳಿಗಾಗಿ. | 30.00 | 7.50 |
| | | ಒಟ್ಟು | 30.00 | 7.50 |
| 3. | ಸಾಕ್ಷರತೆ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನ (ಟ್ರಸ್ಟ್ ಹಾಗೂ ಹೊಸ ಸಂಸ್ಥೆಗಳು)<br>2205-00-102-0-77 | | | |
| | 2205-00-102-0-77-102 | ಸಹಾಯಾನುದಾನ (ಆಸ್ತಿಗಳ ಸೃಜನೆ):<br>ವಿಭಾಗೀಯ ಕಚೇರಿಗಳ ಸುಸಜ್ಜೀಕರಣ ಮತ್ತು ನಿರ್ವಹಣೆ | 10.00 | 2.50 |
| | ಸಹಾಯಾನುದಾನ (ಸಾಮಾನ್ಯ)<br>2205-00-102-0-77-103 | ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಟ್ರಸ್ಟ್/ ಪ್ರತಿಷ್ಠಾನಗಳಿಗೆ ಅನುದಾನ ಬಿಡುಗಡೆ:<br>1. ದ.ರಾ. ಬೇಂದ್ರೆ ಸ್ಮಾರಕ ಟ್ರಸ್ಟ್, ಧಾರವಾಡ<br>2. ಡಾ. ಮಲ್ಲಿಕಾರ್ಜುನ ಮನ್ಸೂರ್ ಟ್ರಸ್ಟ್, ಧಾರವಾಡ<br>3. ಆಲೂರು ವೆಂಕಟರಾವ್ ಟ್ರಸ್ಟ್, ಧಾರವಾಡ<br>4. ಡಾ. ಬಸವರಾಜ ರಾಜಗುರು ಟ್ರಸ್ಟ್, ಧಾರವಾಡ<br>5. ಡಿ.ವಿ. ಹಾಲಭಾವಿ ಟ್ರಸ್ಟ್, ಧಾರವಾಡ<br>6. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಕೋಲಾರ<br>7. ಡಾ. ಡಿ.ವಿ.ಜಿ. ಪ್ರತಿಷ್ಠಾನ, ಕೋಲಾರ<br>8. ಶಿವರಾಮ ಕಾರಂತ ಟ್ರಸ್ಟ್, ದ.ಕ.<br>9. ಶಿವರಾಮ ಕಾರಂತ ಟ್ರಸ್ಟ್, ಉಡುಪಿ<br>10. ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ<br>11. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ<br>12. ವಿ.ಕೃ. ಗೋಕಾಕ ಪ್ರತಿಷ್ಠಾನ, ಹಾವೇರಿ<br>13. ಮೈಲಾರ ಮಹಾದೇವ ಟ್ರಸ್ಟ್, ಹಾವೇರಿ<br>14. ಗಳಗನಾಥ ಟ್ರಸ್ಟ್, ಹಾವೇರಿ | 240.00 | 60.00 |

| | | | | |
|---|---|---|---|---|
| | | 15. ಡಾ. ಪು.ತಿ.ನ ಟ್ರಸ್ಟ್, ಬೆಂಗಳೂರು<br>16. ಡಾ. ಜಿ.ಎಸ್. ಶಿವರುದ್ರಪ್ಪ ಟ್ರಸ್ಟ್, ಬೆಂಗಳೂರು<br>17. ನಿಜಲಿಂಗಪ್ಪ ಟ್ರಸ್ಟ್, ಚಿತ್ರದುರ್ಗ<br>18. ಡಾ. ಗುಬ್ಬಿ ವೀರಣ್ಣ ಟ್ರಸ್ಟ್, ತುಮಕೂರು<br>19. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಶಿವಮೊಗ್ಗ<br>20. ರನ್ನ ಪ್ರತಿಷ್ಠಾನ ಮುಧೋಳ, ಬಾಗಲಕೋಟೆ<br>21. ಧುತ್ತರಗಿ ಪ್ರತಿಷ್ಠಾನ, ಬಾಗಲಕೋಟೆ<br>22. ಹಲಸಂಗಿ ಗೆಳೆಯರ ಬಳಗ ಟ್ರಸ್ಟ್, ವಿಜಯಪುರ<br>23. ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್, ಮಂಡ್ಯ<br>24. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಚಿಕ್ಕಮಗಳೂರು.<br><br>(ಮೇಲ್ಕಂಡ ಟ್ರಸ್ಟ್/ ಪ್ರತಿಷ್ಠಾನಗಳಿಗೆ ಕಳೆದ 5 ವರ್ಷಗಳ ಚಟುವಟಿಕೆಗಳನ್ನು ಪರಿಶೀಲಿಸಿ ಶ್ರೇಣಿಗಳನ್ನು ನೀಡಿ ಲಕ್ಷಗಳಂತೆ ಅಗತ್ಯಕ್ಕನುಗುಣವಾಗಿ ಅನುದಾನ ಬಿಡುಗಡೆ) | | |
| | | ಒಟ್ಟು | 250.00 | 62.50 |
| 4. | ಸ್ವಾತಂತ್ರ್ಯ ಯೋಧರ ಗ್ರಾಮಗಳ ಅಭಿವೃದ್ಧಿ ಹಾಗೂ ಸ್ಮರಣೋತ್ಸವ (ಇತರೆ ಖರ್ಚುಗಳು)<br>2205-00-102-0-80-059 | | | |
| | | ಗಾಂಧೀಜಿ – 150 ಸ್ಮರಣೋತ್ಸವ ಸ್ಮಾರಕ ಭವನ | 25.00 | 6.25 |
| | | ಧಾರವಾಡ ರಂಗಾಯಣದ ಕಲಾವಿದರು/ನಿರ್ದೇಶಕರ ಸಂಭಾವನೆ ಹಾಗೂ ನಿರ್ವಹಣಾ ವೆಚ್ಚ. | 75.00 | 18.75 |
| | | ಒಟ್ಟು | 100.00 | 25.00 |
| 5. | ಜನಪ್ರಿಯ ಸಾಹಿತ್ಯ ಪ್ರಕಾಶನ ಹಾಗೂ ಬಯಲು ರಂಗಮಂದಿರ<br>2205-00-102-1-01 | | | |
| | 2205-00-102 1 01 051 | **ಸಾಮಾನ್ಯ ವೆಚ್ಚಗಳು:**<br>ಇಲಾಖಾ ಟೆಂಡರ್ ಪ್ರಕಟಣೆ, ಜಾಹೀರಾತು, ಇಲಾಖೆಯ ಕ್ಯಾಲೆಂಡರ್, ಡೈರಿ, ಕ್ರಿಯಾ ಯೋಜನೆ, ವಾರ್ಷಿಕ ಪ್ರಗತಿ ಮತ್ತು ಸಾಧನೆಗಳ ಕಿರುಹೊತ್ತಿಗೆ ಮುದ್ರಣಕ್ಕಾಗಿ ವೆಚ್ಚ. | 5.00 | 1.25 |
| | 2205-00-102-1-01-059 | **ಪ್ರಕಟಣೆಗಳು:** ಕನ್ನಡದ ಮಹತ್ವದ ಲೇಖಕರಾದ ಡಾ\|\| ರಾಮಮನೋಹರ ಲೋಹಿಯಾ, ಡಾ\|\| ಚಂದ್ರಶೇಖರ ಕಂಬಾರ, ಅ.ನ.ಕೃ., ಗೌರೀಶ ಕಾಯ್ಕಿಣಿ, ಸಿದ್ದಯ್ಯ ಪುರಾಣಿಕ್, ಡಾ. ಯು.ಆರ್ ಅನಂತಮೂರ್ತಿ, ಕೋ. ಚನ್ನಬಸಪ್ಪ, ವಿ.ಜಿ. ಭಟ್, ಇವರುಗಳ ಸಮಗ್ರ ಹಾಗೂ ಆಯ್ದ ಸಾಹಿತ್ಯ, ಕೃತಿಗಳ ಪ್ರಕಟಣೆಗಳಿಗೆ ಅನುದಾನ. (ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ) | 75.00 | 18.75 |
| | 2205-00-102-1-01-100 | **ಧನಸಹಾಯ / ಪರಿಹಾರ:**<br>ಜಿಲ್ಲಾ ರಂಗಮಂದಿರ ಹಾಗೂ ಜಿಲ್ಲಾ ಸಾಂಸ್ಕೃತಿಕ ಸಮುಚ್ಚಯಗಳ ನಿರ್ವಹಣೆ. | 104.00 | 26.00 |
| | 2205-00-102-1-01-101 | **ಸಹಾಯಾನುದಾನ (ವೇತನಗಳು):**<br>ನೀನಾಸಂ, ಆರ್ಟ್ ಇಂಟಿಗ್ರೇಷನ್ ಸೊಸೈಟಿ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘ - ಅನುದಾನಿತ ಸಂಸ್ಥೆಗಳ ಸಿಬ್ಬಂದಿಯ ವೇತನ ಹಾಗೂ ಕಾರ್ಯಚಟುವಟಿಕೆಗಳಿಗೆ (ಅಗತ್ಯಕ್ಕನುಗುಣವಾಗಿ) | 232.46 | 58.11 |
| | | ಒಟ್ಟು | 416.46 | 104.11 |

| | | | | |
|---|---|---|---|---|
| 6. | ವೃತ್ತಿ ನಾಟಕ ಕಂಪನಿಗಳಿಗೆ ಸಹಾಯ ಇತರೆ ಖರ್ಚುಗಳು 2205-00-102-1-68-059 | ವೃತ್ತಿನಾಟಕ ಕಂಪನಿಗಳಿಗೆ ಕಾಯಕಲ್ಪ ಯೋಜನೆಯಡಿ ಪ್ರೋತ್ಸಾಹಧನ. | 125.00 | 31.25 |
| | | ಶಿವಮೊಗ್ಗ, ರಂಗಾಯಣದ ಕಲಾವಿದರು/ನಿರ್ದೇಶಕರ ಸಂಭಾವನೆ ಹಾಗೂ ನಿರ್ವಹಣಾ ವೆಚ್ಚ. | 75.00 | 18.75 |
| | | ಒಟ್ಟು | **200.00** | **50.00** |
| 7. | ಜಿಲ್ಲಾ ರಂಗಮಂದಿರಗಳಿಗೆ ಧನಸಹಾಯ 2205-00-102-4-03-100 | ಧನಸಹಾಯ/ಪರಿಹಾರ :<br>• ಜಿಲ್ಲಾ ರಂಗಮಂದಿರಗಳ ಉನ್ನತೀಕರಣ ಮತ್ತು ನಿರ್ವಹಣೆ.<br>• ಪ್ರಗತಿಯಲ್ಲಿರುವ ಜಿಲ್ಲಾ ರಂಗಮಂದಿರಗಳಿಗೆ ಅನುದಾನ. | 125.00 | 31.25 |
| | | ಒಟ್ಟು | **125.00** | **31.25** |
| 8. | ರಾಜ್ಯ ಅಕಾಡೆಮಿಗಳು 2205-00-102-4-13-103 | ರಾಜ್ಯ ಅಕಾಡೆಮಿಗಳಿಗೆ ಸಹಾಯಾನುದಾನ :<br>1. ಕರ್ನಾಟಕ ಸಾಹಿತ್ಯ ಅಕಾಡೆಮಿ<br>2. ಕರ್ನಾಟಕ ನಾಟಕ ಅಕಾಡೆಮಿ<br>3. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ<br>4. ಕರ್ನಾಟಕ ಲಲಿತ ಕಲಾ ಅಕಾಡೆಮಿ<br>5. ಕರ್ನಾಟಕ ಯಕ್ಷಗಾನ ಅಕಾಡೆಮಿ<br>6. ಕರ್ನಾಟಕ ಜಾನಪದ ಅಕಾಡೆಮಿ<br>7. ಕರ್ನಾಟಕ ಶಿಲ್ಪಕಲಾ ಅಕಾಡೆಮಿ<br>8. ಕರ್ನಾಟಕ ಬಯಲಾಟ ಅಕಾಡೆಮಿ<br>9. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ<br>10. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ<br>11. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ<br>12. ಕರ್ನಾಟಕ ಅರೆಭಾಷೆ ಸಂಸ್ಕೃತಿ-ಸಾಹಿತ್ಯ ಅಕಾಡೆಮಿ<br>13. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ.<br>(5 ವರ್ಷಗಳ ಕಾರ್ಯಚಟುವಟಿಕೆ ಪರಿಶೀಲಿಸಿ ಹಾಗೂ ಇತರೆ ವೆಚ್ಚಗಳಿಗೆ ಅಗತ್ಯಾನುಸಾರ ಬಿಡುಗಡೆ ಮಾಡುವ ಅನುದಾನ) | 750.00 | 187.50 |
| | | ಒಟ್ಟು | **750.00** | **187.50** |
| 9. | ಜಾನಪದ ಪರಿಷತ್ತಿಗೆ ಸಹಾಯಾನುದಾನ 2205-00-102-4-21 | | | |
| | 2205-00-102-4-21-101 | ಸಹಾಯಾನುದಾನ(ವೇತನಗಳು): ಜಾನಪದ ಪರಿಷತ್ತಿನ ಸಿಬ್ಬಂದಿಗಳಿಗೆ ವೇತನ ಮತ್ತು ನಿರ್ವಹಣೆಗೆ | 79.16 | 19.79 |
| | 2205-00-102-4-21-103 | ಸಹಾಯಾನುದಾನ(ಸಾಮಾನ್ಯ ): ಜಾನಪದ ಪರಿಷತ್ತಿನ ವಿವಿಧ ಕಾರ್ಯಚಟುವಟಿಕೆಗಳು. | 100.00 | 25.00 |
| | | ಒಟ್ಟು | **179.16** | **44.79** |
| 10. | ಕನ್ನಡ ಸಾಹಿತ್ಯ ಪರಿಷತ್ತಿಗೆ ಸಹಾಯಾನುದಾನ (ಸಾಮಾನ್ಯ) 2205-00-102-4-22-103 | ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳು ಹಾಗೂ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ನಿಗದಿಪಡಿಸಿದ ಮೊತ್ತ. | 500.00 | 125.00 |
| | | ಒಟ್ಟು | **500.00** | **125.00** |

| | | | | |
|---|---|---|---|---|
| 11 | ಕನ್ನಡ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ<br>2205-00-102-4-31-059 | | | |
| | | 1. ಉಚಿತ ಬಸ್ ಪಾಸ್ : ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಾಹಿತಿ/ ಕಲಾವಿದರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸಹಯೋಗದೊಂದಿಗೆ ಉಚಿತ ಬಸ್ ಪಾಸ್ ಯೋಜನೆ | 5.00 | 1.25 |
| | | 2. ವೈದ್ಯಕೀಯ ವೆಚ್ಚ: ಕಲಾವಿದರ ವೈದ್ಯಕೀಯ ವೆಚ್ಚ ಮರುಪಾವತಿ. | 20.00 | 5.00 |
| | | 3. ಸುಸಜ್ಜೀಕರಣ ಮತ್ತು ನಿರ್ವಹಣೆ :<br>• ಕನ್ನಡ ಭವನ/ ನಯನ | 100.00 | 25.00 |
| | | • ರವೀಂದ್ರ ಕಲಾಕ್ಷೇತ್ರ | 100.00 | 25.00 |
| | | • ಕಲಾಗ್ರಾಮ | 140.00 | 35.00 |
| | | ಒಟ್ಟು | 365.00 | 91.25 |
| 12. | ರಾಜ್ಯೋತ್ಸವ ದಿನಾಚರಣೆ ನಿಮಿತ್ತ ವೆಚ್ಚ ಇತರೆ ವೆಚ್ಚಗಳು<br>2250-00-800-2-03-059 | ರಾಜ್ಯೋತ್ಸವ ಪ್ರಶಸ್ತಿ, ದಸರಾ, ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಇತರೆ ಪ್ರಶಸ್ತಿಗಳ ವೆಚ್ಚಗಳು | 1200.00 | 300.00 |
| | | ಒಟ್ಟು | 1200.00 | 300.00 |
| | | ಒಟ್ಟು ಮೊತ್ತ | 4451.08 | 1112.77 |

Malathi PS 14/9/20

(ಪಿ.ಎಸ್.ಮಾಲತಿ)

ಸರ್ಕಾರದ ಉಪ ಕಾರ್ಯದರ್ಶಿ

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.